**ಸಾಕ್ಷಿಯನ್ನು ದಿಃ20.06.2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು - 2 ನೇ ಪ್ರತಿವಾದಿ ಪರ ಶ್ರೀ ಸಿ ಎ ಜಿ ವಕೀಲರಿಂದ

ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನೀಡಿರುತ್ತೇನೆ ನನಗೆ ಮುಖ್ಯ ವಿಚಾರಣೆಯಲ್ಲಿ ತೋರಿಸಿರುವಂತೆ ಈಗ ನನಗೆ 34 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸರಿಯಲ್ಲ. ದೊಡ್ಡಮಲ್ಲೇಗೌಡ ಒಟ್ಟು ಕುಟುಂಬದ ಮೂಲ ಪುರುಷ ಇರುತ್ತಾನೆ. ದೊಡ್ಡಮಲ್ಲೇಗೌಡ ನನ್ನ ತಂದೆಯ ತಂದೆ ಇರುತ್ತಾರೆ. ದಾವಾಸ್ವತ್ತು ದೊಡ್ಡಮಲ್ಲೇಗೌಡ ರವರ ಪಿತ್ರಾರ್ಜಿತ ಸ್ವತ್ತು ಇರುತ್ತದೆ. ದೊಡ್ಡಮಲ್ಲೇಗೌಡ ರವರ ತಂದೆಯ ಹೆಸರು ದೊಡ್ಡ ಹೊನ್ನೇಗೌಡ ಇರುತ್ತದೆ. ದೊಡ್ಡಹೊನ್ನೇಗೌಡರವರಿಗೆ ಒಬ್ಬನೇ ಸಹೋದರ ಇದ್ದು ಆತನ ಹೆಸರು ಚಿಕ್ಕಹೊನ್ನೇಗೌಡ ಇರುತ್ತದೆ. ಸದರಿ ಆಸ್ತಿ ದೊಡ್ಡಹೊನ್ನೇಗೌಡರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ದೊಡ್ಡಹೊನ್ನೇಗೌಡರ ತಂದೆ ಕಾಡೇಗೌಡ ಇರುತ್ತಾರೆ. ದೊಡ್ಡಹೊನ್ನೇಗೌಡರವರಿಗೆ ಇಬ್ಬರೂ ಮಕ್ಕಳು ಇರುತ್ತಾರೆ. ಚಿಕ್ಕಹೊನ್ನೇಗೌಡರವರಿಗೆ ಐದೂ ಜನ ಮಕ್ಕಳು ಇರುತ್ತಾರೆ. ದೊಡ್ಡಹೊನ್ನೇಗೌಡ ಮತ್ತು ಚಿಕ್ಕಹೊನ್ನೇಗೌಡರ ನಡುವೆ ಅವರ ಜೀವಿತ ಕಾಲದಲ್ಲಿ ವಿಭಾಗ ಆಗಿರಲಿಲ್ಲ. ಚಿಕ್ಕಹೊನ್ನೇಗೌಡರು ಮೃತ ಪಟ್ಟ ನಂತರ ಹಕ್ಕು ಬದಲಾವಣೆ ಪತ್ರ ಆಗಿದ್ದು ನನಗೆ ಈಗ ತೋರಿಸಿರುವ ದಾಖಲೆ ಸದರಿ ಹಕ್ಕು ಬದಲಾವಣೆ ಪತ್ರದ ಧೃಢೀಕೃತ ನಕಲು ಇರುತ್ತದೆ ಅದನ್ನು ಸಾಕ್ಷಿ ಒಪ್ಪಿಕೊಂಡಿರುವುದರಿಂದ ನಿಶಾನೆ ಡಿ 1 ಎಂದು ಗುರುತಿಸಲಾಯಿತು. ಅದರಂತೆ ಚಿಕ್ಕಹೊನ್ನೇಗೌಡರ ಮಕ್ಕಳಿಗೆ ಚಿಕ್ಕಹೊನ್ನೇಗೌಡರ ಆಸ್ತಿ ಬರಬೇಕೆಂದು ಆಗಿರುತ್ತದೆ ಎಂದರೆ ಸರಿ. ಚಿಕ್ಕಹೊನ್ನೇಗೌಡರ ಮಕ್ಕಳು ಚಿಕ್ಕಮಲ್ಲೇಗೌಡ, ರಾಮೇಗೌಡ, ಸದಾಶಿವೇಗೌಡ, ನಾರಾಯಣಗೌಡ, ಕರಣೇಗೌಡ ಇರುತ್ತದೆ. ದೊಡ್ಡಹೊನ್ನೇಗೌಡರವರಿಗೆ ಇಬ್ಬರೂ ಮಕ್ಕಳು ಇದ್ದು ಅವರ ಹೆಸರು ದೊಡ್ಡಮಲ್ಲೇಗೌಡ ಮತ್ತು ಸಣ್ಣಮ್ಮ ಇರುತ್ತದೆ. ದೊಡ್ಡಮಲ್ಲೇಗೌಡ ನನ್ನ ತಾತ ಇರುತ್ತಾರೆ. ದೊಡ್ಡಹೊನ್ನೇಗೌಡರವರಿಗೆ ಯಾವ ಯಾವ ಆಸ್ತಿ ಬಂದಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದೊಡ್ಡಹೊನ್ನೇಗೌಡರವರ ಆಸ್ತಿ ಆತನ ಒಬ್ಬನೇ ಮಗನಾದ

ದೊಡ್ಡಮಲ್ಲೇಗೌಡನಿಗೆ ಬಂದಿರುತ್ತದೆ ಎಂದರೆ ಸರಿ. ದೊಡ್ಡಮಲ್ಲೇಗೌಡರವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು ಇರುತ್ತಾಳೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲು ಸಮಯವಕಾಶ ಕೋರಿದ್ದು ಸಮಯವಕಾಶವನ್ನು ನೀಡಲಾಯಿತು.

ಮರು ವಿಚಾರಣೆ ಇಲ್ಲ -

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ.ಹೇ.ಕೇ.ಸರಿ ಇದೆ,

ಸಹಿ/-
**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**